# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 818 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಸ್ಥಳಗಳ ಮಾಲೀಕರಿಗೆ ಪರಿಹಾರ ನೀಡಲಾಗುತ್ತಿದೆಯೇ; ಈ ಕುರಿತು ಸರ್ಕಾರ ಅನುಸರಿಸುತ್ತಿರುವ ಮಾರ್ಗಸೂಚಿಗಳೇನು; (ವಿವರವನ್ನು ನೀಡುವುದು) | ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಜಮೀನಿನ ಮಾಲೀಕರಿಗೆ ನಷ್ಟ ಪರಿಹಾರ ನೀಡಲಾಗುತ್ತಿದ್ದು, ಕರ್ನಾಟಕ ಸರಕಾರದ ಅಧಿಸೂಚನೆಯಂತೆ ಪ್ರಸರಣ ಮಾರ್ಗ ಹಾದುಹೋಗುವ ಜಮೀನಿನ ಮಾಲಿಕರಿಗೆ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಯಿಂದ ವೈಜ್ಞಾನಿಕವಾಗಿ ಮೌಲ್ಯ ಮಾಪನ ಮಾಡಿ ಪರಿಹಾರ ನೀಡಲಾಗುತ್ತಿದೆ ಮತ್ತು ಕೇಂದ್ರ ಸರ್ಕಾರದ ಇಂಧನ ಮಂತ್ರಾಲಯದ ಪತ್ರ ಸಂಖ್ಯೆ : 3/7/2015 Trans ದಿನಾಂಕ 15.10.2015, 109ನೇ ಮಂಡಳಿಯ ಸಭೆಯ ನಿರ್ಣಯದಂತೆ ಹಾಗೂ ನಿಗಮದ ಸುತ್ತೋಲೆ KPTCL/ SA8/B7/19105/15-16 Bengaluru ದಿನಾಂಕ: 25.05.2018 & 23.01.2019 ರಂತೆ ಗೋಪುರಗಳಡಿ ಜಾಗಕ್ಕೆ ಮಾರ್ಗದರ್ಶಿ ಮೌಲ್ಯದ ಶೇಕಡಾ 85 ರಂತೆ ಮತ್ತು ಪ್ರಸರಣ ಮಾರ್ಗ ಹಾದುಹೋಗುವ ಜಮೀನಿನ ಕಾರಿಡಾರ್ ಜಾಗಗಳಿಗೆ ಮಾರ್ಗದರ್ಶಿ ಮೌಲ್ಯದ ಶೇಕಡಾ 15 ರಂತೆ ಜಿಲ್ಲಾಧಿಕಾರಿಯವರು ನಿಗದಿಪಡಿಸುವ ಮೌಲ್ಯಕ್ಕೆ ನಿಗಮದಿಂದ ಅನುಮೋದನೆ ಪಡೆದು ಜಮೀನು ಪರಿಹಾರ ನೀಡಲಾಗುವುದು. |
| ಆ) | ಪ್ರಸ್ತುತ ಉಡುಪಿ ಹಾಗೂ ದಕ್ಷಿಣ ಜಿಲ್ಲೆಗಳಲ್ಲಿ ವಿದ್ಯುತ್ ಪ್ರಸರಣ ತಂತಿ ಹಾಕುವ ಕೆಲಸ ಪ್ರಗತಿಯಲ್ಲಿದೆಯೇ; ಇದ್ದಲ್ಲಿ ಎಲ್ಲೆಲ್ಲಿ ಕೆಲಸ ಪ್ರಗತಿಯಲ್ಲಿದೆ; (ವಿವರ ನೀಡುವುದು) | ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿ ಪ್ರಗತಿಯಲ್ಲಿರುವ ಕಾಮಗಾರಿಗಳು:<br>1. ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ತಾಲೂಕಿನ ಕಡಂದಲೆಯಲ್ಲಿ ಉದ್ದೇಶಿತ 2*500ಎಂವಿಎ, 400/220 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಕಲ್ಲೋಳಿಯ ಸರಹದ್ದಿನಲ್ಲಿ ಹಾಲಿ ಹಾದುಹೋಗಿರುವ 400 ಕೆವಿ ಯು.ಪಿ.ಸಿ.ಎಲ್-ಶಾಂತಿಗ್ರಾಮ ದ್ವಿಪ್ರಸರಣ ಮಾರ್ಗದಿಂದ 400 ಕೆವಿ, 4.217 ಕಿ.ಮೀ. ಮಲ್ಟಿಸರ್ಕ್ಯೂಟ್ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ. |

| | | |
|---|---|---|
| | | 2. ಕಡಂದಲೆಯಲ್ಲಿ ಉದ್ದೇಶಿತ 400/220 ಕೆವಿ ವಿದ್ಯುತ್ ಉಪಕೇಂದ್ರದಿಂದ ಪುತ್ತಿಗೆ ಗ್ರಾಮದಲ್ಲಿ ಹಾಲಿ ಹಾದುಹೋಗಿರುವ 220 ಕೆವಿ ಕೇಮಾರ್-ಬಜ್ಪೆ ದ್ವಿಪ್ರಸರಣ ಮಾರ್ಗಕ್ಕೆ 220 ಕೆವಿ 5.247 ಕಿ.ಮೀ. ಮಲ್ಟಿಸರ್ಕ್ಯೂಟ್ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ.<br><br>3. ಕಡಂದಲೆಯಲ್ಲಿ ಉದ್ದೇಶಿತ 400/220 ಕೆವಿ ವಿದ್ಯುತ್ ಉಪಕೇಂದ್ರದಿಂದ ಪುತ್ತಿಗೆ ಗ್ರಾಮದಲ್ಲಿ ಹಾಲಿ ಹಾದುಹೋಗಿರುವ 220 ಕೆವಿ ಕೇಮಾರ್-ಕಾವೂರು (KM3) ದ್ವಿಪ್ರಸರಣ ಮಾರ್ಗಕ್ಕೆ 220 ಕೆವಿ 5.672 ಕಿ.ಮೀ. ಮಲ್ಟಿಸರ್ಕ್ಯೂಟ್ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ.<br><br>ಪ್ರಸ್ತುತ ಉಡುಪಿ ಜಿಲ್ಲೆಯ ಹಾಲಿ ಪ್ರಗತಿಯಲ್ಲಿರುವ ಕಾಮಗಾರಿಗಳು:<br><br>1. ಬ್ರಹ್ಮಾವರ ತಾಲೂಕು ಹೆಗ್ಗುಂಜೆ ಗ್ರಾಮದಲ್ಲಿ ಸ್ಥಾಪನೆಗೊಂಡಿರುವ 220/110/11 ಕೆ.ವಿ ವಿದ್ಯುತ್ ಕೇಂದ್ರದ ಯೋಜನೆಯಲ್ಲಿ<br>• 17.5 ಕಿ.ಮೀ. ಉದ್ದದ 110 ಕೆ.ವಿ. ಹೆಗ್ಗುಂಜೆ - ಬ್ರಹ್ಮಾವರ ವಿದ್ಯುತ್ ದ್ವಿಪ್ರಸರಣ ಮಾರ್ಗ ನಿರ್ಮಾಣ ಮತ್ತು<br>• 24 ಕಿ.ಮೀ. ಉದ್ದದ 220/110 ಕೆ.ವಿ. ಹೆಗ್ಗುಂಜೆ – ಕುಂದಾಪುರ ವಿದ್ಯುತ್ ದ್ವಿಪ್ರಸರಣ ಮಾರ್ಗ ನಿರ್ಮಾಣ.<br><br>2. ಕಾಪು ತಾಲೂಕಿನ ಪ್ರಸ್ತುತವಿರುವ 110/11 ಕೆವಿ ವಿದ್ಯುತ್ ಕೇಂದ್ರ ನಂದಿಕೂರು ನಿಂದ ಹೊಸ 110/11 ಕೆವಿ ವಿದ್ಯುತ್ ಕೇಂದ್ರ ಬೆಳಪು ವರೆಗಿನ 110 ಕೆವಿ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ. ಇದಲ್ಲದೇ, ಅಂತರ ರಾಜ್ಯ ಪ್ರಸರಣ ಮಾರ್ಗವಾದ ಉಡುಪಿ - ಕಾಸರಗೋಡು ಮಾರ್ಗವು ಕೇಂದ್ರ ಸರ್ಕಾರದ Tariff Based Competitive Bidding (TBCB) ಆಧಾರದಲ್ಲಿ ನಿರ್ಮಾಣಗೊಳ್ಳುತ್ತಿದೆ. |
| ಇ) | ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಸ್ಥಳಗಳ ಮಾಲೀಕರಿಗೆ ಈಗ ನೀಡಲಾಗುತ್ತಿರುವ ಪರಿಹಾರದ ಮೊತ್ತವೆಷ್ಟು; ಹಾಗೂ ಈಗಾಗಲೇ ನೀಡಲಾದ ಮೊತ್ತವೆಷ್ಟು; ಇನ್ನು ನೀಡಲು ಬಾಕಿಯಿರುವ ಪರಿಹಾರದ ಮೊತ್ತ ಎಷ್ಟು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕಾಮಗಾರಿಗಳನ್ನು ದಿನಾಂಕ 30.11.2022 (ಕಡಂದಲೆ) ರಂದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ ಈ ತನಕ ಯಾವುದೇ ಪರಿಹಾರ ನೀಡಲಾಗಿರುವುದಿಲ್ಲ. ಕಾಮಗಾರಿ ನಡೆಯುವ ಸಮಯದಲ್ಲಿ, ಮೇಲಿನ ಸುತ್ತೋಲೆಯಂತೆ ಜಮೀನಿನ/ಬೆಳೆಗಳ/ಮರಗಳ ಮೌಲ್ಯ ನಿಗದಿಪಡಿಸಿ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತ ಕಾಮಗಾರಿ ಆರಂಭಿಕ ಹಂತದಲ್ಲಿದೆ.<br><br>ಉಡುಪಿ ಜಿಲ್ಲೆಯ ಕಾಮಗಾರಿಗಳಲ್ಲಿ (ಹೆಗ್ಗುಂಜೆ & ಬೆಳಪು) ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಸ್ಥಳಗಳ ಮಾಲೀಕರಿಗೆ ಜಿಲ್ಲಾ ದಂಡಾಧಿಕಾರಿಯವರಿಂದ ಭೂ ಮೌಲ್ಯ ದರಪಟ್ಟಿ ನಿಗದಿಪಡಿಸಲಾಗಿದ್ದು, ನಿಗಮ ಕಛೇರಿಯಲ್ಲಿ ಅನುಮೋದನೆ ಹಂತದಲ್ಲಿದೆ. |

....3

| | | |
|---|---|---|
| ಈ) | ಪ್ರಸ್ತುತ ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಸ್ಥಳಗಳ ಮಾಲೀಕರಿಗೆ ನೀಡಲಾಗುತ್ತಿರುವ ಮೊತ್ತ ಕಡಿಮೆಯಿರುವ ಬಗ್ಗೆ ಸ್ಥಳದ ಮಾಲೀಕರು ತಕರಾರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾರಿಡಾರ್ ಪ್ರದೇಶದಲ್ಲಿ ಸ್ಥಳದ ಮಾರ್ಗದರ್ಶಿ ಮೌಲ್ಯದ ಕೇವಲ 15 ಶೇಕಡ ಪರಿಹಾರವನ್ನು ನೀಡಿ ನಿಯಮಗಳ ಪ್ರಕಾರ ಜಾಗವನ್ನು ಖಾಲಿಯಿಡಲು ಸೂಚಿಸುವುದು ಸರಿಯೇ; ಈ ಕುರಿತು ಮಾರ್ಗಸೂಚಿಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ವಿದ್ಯುತ್ ಪ್ರಸರಣ ತಂತಿ ಹಾದು ಹೋಗುವ ಸ್ಥಳಗಳ ಭೂ ಮಾಲೀಕರು ಗರಿಷ್ಠ ಮೊತ್ತದ ಪರಿಹಾರವನ್ನು ನಿಗದಿಪಡಿಸಿ ನೀಡುವ ಬಗ್ಗೆ ಬೇಡಿಕೆ ಇಟ್ಟಿರುತ್ತಾರೆ.<br><br>ಪ್ರಸ್ತುತ, ಕವಿಪ್ರನಿನಿ ವ್ಯಾಪ್ತಿಯಲ್ಲಿ ಗೋಪುರಗಳಡಿ ಜಾಗಕ್ಕೆ ಮಾರ್ಗದರ್ಶಿ ಮೌಲ್ಯದ ಶೇಕಡಾ 85 ರಂತೆ ಮತ್ತು ಪ್ರಸರಣ ಮಾರ್ಗ ಹಾದುಹೋಗುವ ಜಮೀನಿಗೆ ಕಾರಿಡಾರ್ ಜಾಗಗಳಿಗೆ ಮಾರ್ಗದರ್ಶಿ ಮೌಲ್ಯದ ಶೇಕಡಾ 15 ರಂತೆ ಜಿಲ್ಲಾಧಿಕಾರಿಯವರು ನಿಗದಿಪಡಿಸುವ ಮೌಲ್ಯಕ್ಕೆ ನಿಗಮದಿಂದ ಅನುಮೋದನೆ ಪಡೆದು ಜಮೀನು ಪರಿಹಾರ ನೀಡಲಾಗುತ್ತಿದ್ದು, ಪ್ರಸರಣ ಮಾರ್ಗ ಹಾದು ಹೋಗುವ ಜಮೀನುಗಳಲ್ಲಿ ಮರಗಳನ್ನು ಹೊರತು ಪಡಿಸಿ ಕೃಷಿ ಬೆಳೆಗಳನ್ನು ಬೆಳೆಯಬಹುದಾಗಿದೆ.<br><br>ಉಡುಪಿ – ಕಾಸರಗೋಡು ಪ್ರಸರಣ ಮಾರ್ಗದ ನಿರ್ಮಾಣಕ್ಕಾಗಿ, ಜಿಲ್ಲಾಧಿಕಾರಿಗಳು ನಿಗದಿಪಡಿಸಿರುವ ಪರಿಹಾರ ಮೊತ್ತದಂತೆ, ಭೂಮಾಲೀಕರಿಗೆ ಪರಿಹಾರ ಧನ ವಿತರಿಸಬೇಕಾಗಿದೆ. |
| ಉ) | ಸದರಿ ವಿದ್ಯುತ್ ಪ್ರಸರಣವನ್ನು ಭೂಮಿಯ ಅಡಿಯಿಂದ ಮಾಡುವ ಬಗ್ಗೆ (ಅಂಡರ್ ಗ್ರೌಂಡ್ ಲೈನ್) ಸರ್ಕಾರದ ನಿಲುವೇನು? (ವಿವರ ನೀಡುವುದು) | ಸಾಮಾನ್ಯವಾಗಿ ವಿದ್ಯುತ್ ಪ್ರಸರಣ ಮಾರ್ಗಗಳನ್ನು ಓವರ್ ಹೆಡ್ ಮಾರ್ಗಗಳನ್ನಾಗಿ ನಿರ್ಮಿಸಲಾಗುತ್ತಿದೆ.<br><br>ಭೂಗತ ಕೇಬಲ್‌ಗಳ ಕಾರ್ಯಾಚರಣೆಗೆ ಹೆಚ್ಚಿನ ಚಾರ್ಜಿಂಗ್ ಕರೆಂಟ್ (charging current) ಮತ್ತು ರಿಯಾಕ್ಟೀವ್ ಪವರ್ (Reactive power) ನ ಅಗತ್ಯವಿರುತ್ತದೆ. ರಿಯಾಕ್ಟೀವ್ ಪವರ್ ಸ್ವಭಾವತಃ ಕೆಪಾಸಿಟೀವ್ ಆಗಿದ್ದು ಮತ್ತು Ferranti effectsನ ಪರಿಣಾಮದಿಂದಾಗಿ ಕಳುಹಿಸುವ (sending) ಮತ್ತು ಸ್ವೀಕರಿಸುವ (receiving) ಕಡೆಗಳಲ್ಲಿ ವೋಲ್ಟೇಜ್ ಏರಿಕೆಯಾಗುತ್ತದೆ. ಚಾರ್ಜಿಂಗ್ ಕರೆಂಟ್‌ನ ಪ್ರವಾಹವು ಕೇಬಲ್‌ಗಳ ತಾಪಮಾನವನ್ನು ಹೆಚ್ಚಿಸುತ್ತದೆ ಮತ್ತು ಕೇಬಲ್ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಕೆಲವೊಮ್ಮೆ ಹೆಚ್ಚಿನ ಡೈಎಲೆಕ್ಟ್ರಿಕ್ ನಷ್ಟದಿಂದಾಗಿ ಕೇಬಲ್ ತಾಪಮಾನವು ಮತ್ತಷ್ಟು ಹೆಚ್ಚಾಗಬಹುದು. ಹಾಗೂ ಕೇಬಲ್ ಹಾನಿ (Damage) ಆಗುವ ಸಂಭವವಿರುತ್ತದೆ. ಕೇಬಲ್ ಕೆಪಾಸಿಟಿವ್ ಕರೆಂಟ್ ಸ್ವಿಚಿಂಗ್‌ನಿಂದಾಗಿ ಹೆಚ್ಚಿನ ವೋಲ್ಟೇಜ್‌ಗಳಿಗೆ ಕಾರಣವಾಗುತ್ತದೆ ಮತ್ತು ಉಪಕೇಂದ್ರದಲ್ಲಿ ಸ್ಥಾಪಿಸಲಾಗುವ ಉಪಕರಣಗಳ ಮೇಲೆ ಪರಿಣಾಮ (Flash over) ಬೀರುತ್ತದೆ.<br><br>ಭೂಗತ ಕೇಬಲ್‌ನಲ್ಲಿ ಉಂಟಾಗುವ ಹೆಚ್ಚಿನ ಚಾರ್ಜಿಂಗ್ ಕರೆಂಟ್‌ನಿಂದಾಗಿ ಭೂಗತ ಕೇಬಲ್ ಅಳವಡಿಸುವುದು ಸೂಕ್ತವಾಗಿರುವುದಿಲ್ಲ. ಹಾಗೂ ಭೂಗತ ಕೇಬಲ್ ಗಳಲ್ಲಿ ದೋಷಗಳು (fault) ಕಂಡು ಬಂದಲ್ಲಿ ಪತ್ತೆ ಹಚ್ಚುವುದು ಕಷ್ಟಕರವಾಗಿರುತ್ತದೆ ಹಾಗೂ ದೋಷ ಸರಿಪಡಿಸಿ ವಿದ್ಯುತ್ ಸಂಬಂಧಿಸಿದ ಮರು ಸ್ಥಾಪನೆಗೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. |

...4

| | | |
|---|---|---|
| | | ಒಂದು ಕಿ.ಮೀ 220 ಕೆ.ವಿ. ದ್ವಿಪ್ರಸರಣ ಮಾರ್ಗ (Double circuit) ಓವರ್ ಹೆಡ್ ಮಾರ್ಗವನ್ನು ನಿರ್ಮಿಸಲು ಅಂದಾಜು ರೂ. 1 ಕೋಟಿ ವೆಚ್ಚವಾಗುತ್ತದೆ. ಒಂದು ಕಿ.ಮೀ 220 ಕೆ.ವಿ. ದ್ವಿಪ್ರಸರಣ ಮಾರ್ಗ (Double circuit) ಭೂಗತ ಕೇಬಲ್ ಅಳವಡಿಸಲು ಅಂದಾಜು ರೂ. 28 ಕೋಟಿ ವೆಚ್ಚವಾಗುತ್ತದೆ.<br><br>ಈ ಕಾರಣಗಳಿಂದಾಗಿ ಭೂಗತ ಕೇಬಲ್ ಗಳನ್ನು ಅಳವಡಿಸುವುದು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಸಮಂಜಸವಾಗಿರುವುದಿಲ್ಲ. ಅಲ್ಲದೇ, ಭೂಗತ ಕೇಬಲ್ ಅಳವಡಿಸುವುದರಿಂದ ರಾಜ್ಯದ ವಿದ್ಯುತ್ ಗ್ರಾಹಕರಿಗೂ ಕೂಡ ಹೆಚ್ಚಿನ ಹೊರೆ ಉಂಟಾಗಲಿದೆ. |

ಸಂಖ್ಯೆ: ಎನರ್ಜಿ 273 ಇಬಿಎಸ್ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು